**OS No.16/2017**
**DW-1**

(ದಿನಾಂಕ 03.08.2023 ರಂದು ಸಾಕ್ಷಿಗೆ ಪುನಃ ಕರೆಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು).

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಲ್ ವಕೀಲರಿಂದ :**

ನನ್ನ ಅಜ್ಜನ ಹೆಸರು ನಾಗನಗೌಡ ಅಂದರೆ ಸರಿ. ನನ್ನ ಅಜ್ಜಿಯ ಹೆಸರು ಶರಬಮ್ಮ ಅಂದರೆ ಸರಿ. ನನ್ನ ಅಜ್ಜ 2014 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಜ್ಜಿ ಮೃತಪಟ್ಟ ವರ್ಷ ನನಗೆ ನೆನಪಿಲ್ಲ. ನನ್ನ ಅಜ್ಜನಿಗೆ ಒಟ್ಟು 4 ಜನ ಗಂಡು ಮಕ್ಕಳು ಮತ್ತು 2 ಜನ ಹೆಣ್ಣು ಮಕ್ಕಳು. ಅವರೆಂದರೆ ವಾದಿ. ನನ್ನ ತಂದೆ ಭೀಮನಗೌಡ. ಪ್ರತಿವಾದಿ-2. ಪ್ರತಿವಾದಿ-3. ನನ್ನ ಅತ್ತೆಯ ಹೆಸರು ಶರಣಮ್ಮ ಮತ್ತು ಬಸ್ಸಮ್ಮ. ಶರಣಮ್ಮ ಮೃತಪಟ್ಟಿದ್ದು ಪ್ರತಿವಾದಿ 6 ರಿಂದ 9 ಅವರ ಮಕ್ಕಳು ಅಂದರೆ ಸರಿ. ಸದರಿ ಬಸ್ಸಮ್ಮ 10 ನೇ ಪ್ರತಿವಾದಿ ಅಂದರೆ ಸರಿ. ನನ್ನ ತಂದೆ ಮತ್ತು 2 ನೇ ಪ್ರತಿವಾದಿ ದಾವೆ ಚಾಲ್ತಿಯಲ್ಲಿರುವಾಗ ಮೃತಪಟ್ಟಿರ್ರತ್ತಾರೆ ಅಂದರೆ ಸರಿ.

2. ದಾವಾ ಜಮೀನು ಕ್ರಮ ಸಂಖ್ಯೆ 1 ರಿಂದ 3 ವಾದಿ ಮತ್ತು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಅಂದರೆ ಸರಿ. ದಾವಾ ಜಮೀನು ಕ್ರಮ ಸಂಖ್ಯೆ 4 ನನ್ನ ಅಜ್ಜಿ ಶರಬಮ್ಮ ಇವರಿಗೆ ಅವರ ತವರು ಮನೆಯಿಂದ ಬಂದ ಆಸ್ತಿ ಅಂದರೆ ಸರಿ. ನನ್ನ ಅಜ್ಜ ಜೀವಿತ ಕಾಲದಲ್ಲಿ ಮನೆಯ ಯಜಮಾನಿಕೆ ಮಾಡುತ್ತಿದ್ದ ಅಂದರೆ ಸರಿ. ದಾವಾ ಜಮೀನು ಕ್ರಮ ಸಂಖ್ಯೆ 5 ನನ್ನ ಅಜ್ಜ ಖರೀದಿಸಿ ನನ್ನ ಚಿಕ್ಕಪ್ಪ ವೀರನಗೌಡ ಇವರ ಹೆಸರಿನಲ್ಲಿ ದಾಖಲೆ ಮಾಡಿಸಿದ್ದ ಅಂದರೆ ಸರಿ. ದಾವಾ ಜಮೀನು ಕ್ರಮ ಸಂಖ್ಯೆ 6 ಮತ್ತು 7 ನನ್ನ ಅಜ್ಜ ಖರೀದಿಸಿ. ದಾಖಲೆಯನ್ನು 4 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿಸಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಅವು ನನ್ನ ತಾಯಿಯ ತವರು ಮನೆಯ ಆಸ್ತಿಗಳು ಎಂದು ಹೇಳುತ್ತಾರೆ. ಸದರಿ ಆಸ್ತಿಗಳು ನನ್ನ ತಾಯಿಯ ತವರು ಮನೆಯ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ಆ ಬಗ್ಗೆ ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿರುತ್ತೇನೆ. ಸದರಿ ಆಸ್ತಿಗಳು ಮೊದಲು ನನ್ನ ತಾಯಿಯ ಹೆಸರಿನಲ್ಲಿದ್ದವು ಅವರ ನಂತರ ನಮ್ಮ ಹೆಸರನಲ್ಲಿ ವರ್ಗಾವಣೆ ಆಗಿರುತ್ತವೆ. ಸದರಿ ಆಸ್ತಿಗಳು ನನ್ನ ತಾಯಿಯ ತವರು ಮನೆಯ ಆಸ್ತಿಗಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 6 ನನ್ನ ಅಜ್ಜ ಖರೀದಿಸಿ

4 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲೆ ಮಾಡಿಸಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ7 ನನ್ನ ಅಜ್ಜ ಮೂಲ ಮಾಲೀಕರಿಂದ ಖರೀದಿಸಿ ನನ್ನ ಸಹೋದರ ಪ್ರತಿವಾದಿ-4 ರ ಹೆಸರಿನಲ್ಲಿ ದಾಖಲೆ ಮಾಡಿಸಿರುತ್ತಾರೆ ಅಂದರೆ ಸರಿಯಲ್ಲ.

3. ನನ್ನ ತಾಯಿ ಒಕ್ಕಲುತನ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಮದುವೆ ಆದ ನಂತರ ನನ್ನ ತಂದೆಯೊಂದಿಗೆ ಕಲಂಗೇರ ಗ್ರಾಮದಲ್ಲಿ ವಾಸ ಇದ್ದರು. ನಾವು ಕಲಂಗೇರ ಗ್ರಾಮದಲ್ಲಿ ವಾಸ ಇದ್ದ ಬಗ್ಗೆ ಬರೆಸಿರುತ್ತೇವೆ. ನನ್ನ ತಂದೆ ತಾಯಿ ಹಾಗೂ ನಾವು ಕಲಂಗೇರ ಗ್ರಾಮದಲ್ಲಿ ವಾಸ ಇದ್ದೇವು ಎಂದು ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಅಜ್ಜ ಜೀವಿತಕಾಲದಲ್ಲಿ ಸರಕಾರಿ ಸೌಲಭ್ಯಗಳನ್ನು ಪಡೆಯುವ ಉದ್ದೇಶದಿಂದ ಆಸ್ತಿಗಳನ್ನು ಖರೀದಿಸಿ ನಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ದಾಖಲೆಗಳನ್ನು ನಾಮ ಮಾತ್ರಕ್ಕೆ ಮಾಡಿಸಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಾಯಿಗೆ ಆಸ್ತಿಗಳನ್ನು ಖರೀದಿಸಲು ಸ್ವತಃ ಸಂಪಾದನೆ ಇತ್ತು ಎಂದು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ನನ್ನ ತಾಯಿಗೆ ತವರು ಮನೆಯಲ್ಲಿ ಒಟ್ಟು 40 ಎಕರೆ ಜಮೀನು ಇತ್ತು ಅದರಲ್ಲಿ 21 ಎಕರೆ ಜಮೀನು ಮಾರಾಟ ಮಾಡಿ ದಾವಾ ಜಮೀನು ಕ್ರಮ ಸಂಖ್ಯೆ 6 ಮತ್ತು 7 ಖರೀದಿಸಿರುತ್ತಾರೆ. ಆ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ ನಿಡಿ-1 ರಿಂದ 8, 13 ರಿಂದ 22 ರ ಜಮೀನುಗಳು ನನ್ನ ತಾಯಿಯ ತವರು ಮನೆಯ ಆಸ್ತಿಗಳು ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ನಾನು ಆ ಬಗ್ಗೆ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಜಮೀನು ಕ್ರಮ ಸಂಖ್ಯೆ 8 ನನ್ನ ಅಜ್ಜ ಖರೀದಿಸಿ ನನ್ನ ತಾಯಿಯ ಹೆಸರಿನಲ್ಲಿ ದಾಖಲೆ ಮಾಡಿಸಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ತಾಯಿ ಮೃತಪಟ್ಟ ನಂತರ ನನ್ನ ಹೆಸರಿನಲ್ಲಿ ವರ್ಗಾವಣೆ ಮಾಡಿಕೊಂಡಿರುತ್ತೇನೆ ಅಂದರೆ ಸಾಕ್ಷಿ ನನ್ನ ತಾಯಿಯ ಜೀವಿತ ಕಾಲದಲ್ಲಿ ವರ್ಗಾವಣೆ ಮಾಡಿಸಿರುವುದಾಗಿ ಹೇಳುತ್ತಾರೆ. ಸದರಿ ಆಸ್ತಿಯನ್ನು ನನ್ನ ಅಜ್ಜ ಖರೀದಿಸಿ ದಾಖಲೆಯನ್ನು ನನ್ನ ತಾಯಿಯ ಹೆಸರಿನಲ್ಲಿ ಮಾಡಿಸಿದ್ದರೂ ಅದು ನನ್ನ ತಾಯಿಯ ತವರು ಮನೆಯ ಆಸ್ತಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಖರೀದಿಸಿಲು ನನ್ನ ತಾಯಿಗೆ ಯಾವುದೇ ಸಂಪಾದನೆ ಇರಲಿಲ್ಲ ಅಂದರೆ ಸರಿಯಲ್ಲ. ನನ್ನ ಅಜ್ಜ ಮೃತಪಟ್ಟ ನಂತರ

ಕುಟುಂಬದ ಯಜಮಾನಿಕೆ ನನ್ನ ತಂದೆ ನೋಡುತ್ತಿದ್ದ ಅಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನನ್ನ ತಂದೆ ಹಿರಿಯ ಮಗ ಅಂದರೆ ಸರಿ. ನನ್ನ ಅಜ್ಜ ಮೃತಪಟ್ಟ ನಂತರ ಕುಟುಂಬದ ಯಾಜಮಾನಿಕ ನನ್ನ ತಂದೆ ಮಾಡುತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆ ಮನೆಯ ಯಾಜಮಾನಿಕ ನೋಡುವಾಗ ಬಂದ ಒಟ್ಟು ಕುಟುಂಬದ ಸಂಪಾದನೆಯಿಂದ ದಾವಾ ಕ್ರಮ ಸಂಖ್ಯೆ 9 ನನ್ನ ಸಹೋದರ 4 ನೇ ಪ್ರತಿವಾದಿ ಹೆಸರಿನಲ್ಲಿ ಹಾಗೂ ಕ್ರಮ ಸಂಖ್ಯೆ 10 ರ ಜಮೀನು ನನ್ನ ಹೆಸರಿನಲ್ಲಿ ಖರೀದಿಸಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಪಾತಾಪೂರ ಗ್ರಾಮದಲ್ಲಿ ಒಟ್ಟು 2 ಮನೆಗಳು ಇವೆ ಅಂದರೆ ಸರಿ. ಎರಡು ಮನೆಗಳಲ್ಲಿ ನಾವೇ ಸುಮಾರು 14 ವರ್ಷಗಳಿಂದ ವಾಸ ಇರುತ್ತೇವೆ. ಪಾತಾಪೂರದಲ್ಲಿ ಇವರು ಮನೆಗಳು ಎಲ್ಲರು ಕೂಡಿ ಇದ್ದಾಗ ಕಟ್ಟಿಸಿದ ಮನೆಗಳು ಅಂದರೆ ಸರಿಯಲ್ಲ. ದಾವಾ ಜಮೀನು ಕ್ರಮ ಸಂಖ್ಯೆ 9 ಮತ್ತು 10 ನನ್ನ ತಾಯಿ ಖರೀದಿಸಿ ನನ್ನ ಮತ್ತು 4 ನೇ ಪ್ರತಿವಾದಿ ಹೆಸರಿನಲ್ಲಿ ದಾಖಲೆ ಮಾಡಿಸಿರುತ್ತಾರೆ. ಸದರಿ ಎರಡು ಜಮೀನುಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದರು ನನ್ನ ತಾಯಿ ಖರೀದಿಸಿದ ಜಮೀನುಗಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ವಿಭಾಗ ಆಗಿರುವುದಿಲ್ಲ ಅವು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ. 2015 ನೇ ಸಾಲಿನಲ್ಲಿ ವಾದಿ, ನನ್ನ ತಂದೆಗೆ ದಾವಾ ಆಸ್ತಿಗಳಲ್ಲಿ ಆದಾಯದ ಲೆಕ್ಕಪತ್ರವನ್ನು ಕೊಡದೇ ಇರುವುದರಿಂದ ದಾವಾ ಆಸ್ತಿಗಳಲ್ಲಿ ತನ್ನ ಪಾಲನ್ನು ವಿಭಾಗ ಮಾಡಿಕೊಡುವಂತೆ ಕೇಳಿದಾಗ, ನನ್ನ ತಂದೆ ಇತರೇ ಪ್ರತಿವಾದಿಗಳೊಂದಿಗೆ ಕೂಡಿಕೊಂಡು ನಿರಾಕರಿಸಿದ್ದರಿಂದ ಈ ದಾವೆ ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ.

4. ವಾದಿ ಪಾತಾಪೂರ ಗ್ರಾಮದಲ್ಲಿ ವಾಸ ಇರುತ್ತಾನೆ. ದಾವಾ ಆಸ್ತಿಗಳ ಪೈಕಿ ಯಾವುದೇ ಆಸ್ತಿಯನ್ನು ವಾದಿಯ ಹೆಸರನಲ್ಲಿ ಪಹಣಿ ಪತ್ರಿಕೆಗಳಲ್ಲಿ ಸೇರಿಸಿರುವುದಿಲ್ಲ ಅಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ 1, 2010 ನೇ ಸಾಲಿನಲ್ಲಿ 3 ನೇ ಪ್ರತಿವಾದಿ ವರ್ಗಾವಣೆ ಮಾಡಿಸಿಕೊಂಡಿರುತ್ತಾನೆ ಅಂದರೆ ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿರುವುದಾಗಿ ಹೇಳುತ್ತಾರೆ. 2010 ರ ಪೂರ್ವದಲ್ಲಿ ಸದರಿ ಜಮೀನು ನನ್ನ ಅಜ್ಜನ ಹೆಸರಿನಲ್ಲಿತ್ತು ಅಂದರೆ ಸರಿ. ಜಮೀನು ಕ್ರಮ ಸಂಖ್ಯೆ 2

ಮತ್ತು 3 ಮೊದಲು ನನ್ನ ಅಜ್ಜನ ಹೆಸರಿನಲ್ಲಿದ್ದವು ನಂತರ 2 ನೇ ಪ್ರತಿವಾದಿ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತವೆ ಅಂದರೆ ಸರಿ. ದಾವಾ ಆಸ್ತಿ ಕ್ರಮ ಸಂಖ್ಯೆ 4 ನನ್ನ ಅಜ್ಜಿ ಶರಬಮ್ಮ ಹೆಸರಿನಲ್ಲಿತ್ತು ಅವರು ಮೃತಪಟ್ಟ ನಂತರ ನನ್ನ ತಂದೆಯ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತದೆ ಅಂದರೆ ಸಾಕ್ಷಿ ನನ್ನ ಅಜ್ಜಿ ಜೀವಂತ ಇರುವಾಗಲೇ ನನ್ನ ತಂದೆಯ ಹೆಸರಿನಲ್ಲಿ ವರ್ಗಾವಣೆ ಮಾಡಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಆ ಬಗ್ಗೆ ದಾಖಲೆ ನೋಡಿಲ್ಲ ಆದರೆ ನನ್ನ ತಂದೆಯ ಹೇಳಿಕೆ ಮೇರೆಗೆ ಗೊತ್ತು. ಸಾಕ್ಷಿಗೆ ನಿಪಿ-64 ತೋರಿಸಿ ನನ್ನ ಅಜ್ಜಿ ಮೃತಪಟ್ಟ ನಂತರ ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ವರ್ಗಾವಣೆ ಆಗಿರುವ ಬಗ್ಗೆ ನಮೂದಿಸಿರುತ್ತಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 6 ರಿಂದ 10 ರಲ್ಲಿ ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಅವು ನನ್ನ ತಾಯಿ ಖರೀದಿಸಿದ ಆಸ್ತಿಗಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಮತ್ತು ವಾದಿಯ ಒಟ್ಟು ಕುಟುಂಬದ ಆಸ್ತಿಗಳು. ವಾದಿಗೆ 1/6 ಅಂಶ ಭಾಗ ಇದೆ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು. ಮಾನ್ವಿ**